ವಿಶಾಖ. ಎನ್.

# ಪ್ರಕೃತಿಯ ಎದುರು ಕೃಷಿಕನ ಖದರು

ಸಿನಿಮಾ ಸಂಯಮ ಬೇಡುವ ಕುಶಲಕಲೆ. ಕೆಟ್ಟ ಸಿನಿಮಾ ಮಾಡುವುದು ಕೂಡ ಸುಲಭವಲ್ಲ. ಅಂಥಾದರಲ್ಲಿ ಆತ್ಮಸಂಯಮದ ಚಿತ್ರಪಟ ಮೂಡಿಸುವುದಂತೂ ಬೆರಗಿನ ಸಂಗತಿ. ಸಣ್ಣ ದೇಶ ಜಾರ್ಜಿಯಾದ ಕನಸುಗಾರ ನಿರ್ದೇಶಕ ಜಾರ್ಜ್ ಒವ್ಯಾಷ್‌ವಿಲಿ ಕುಶಲಮತಿಯ ಉತ್ಪನ್ನ 'ಕಾರ್ನ್ ಐಲೆಂಡ್'. ಯುದ್ಧ, ರಾಜಕೀಯ ಬಿಕ್ಕಟ್ಟು, ಪ್ರಕೃತಿಯ ಮುನಿಸು ಎಲ್ಲವನ್ನೂ ಅಡಗಿಸಿಟ್ಟುಕೊಂಡ ಈ ಸಿನಿಮಾದ ಧಾಟಿಯಲ್ಲಿ ಎಲ್ಲೂ ಭಾವುಕತೆ ಅತಿಯಾಗದಂಥ ದಿವ್ಯ ಎಚ್ಚರವಿದೆ. ಎಲ್ಲವನ್ನೂ ಕಾಣಿಸುವುದಷ್ಟೇ ತನ್ನ ಕೆಲಸ ಎಂದು ಭಾವಿಸಿದ ನಿರ್ದೇಶಕನಷ್ಟೇ ಇಂಥ ಧೋರಣೆಯ ಸಿನಿಮಾ ಮಾಡಲು ಸಾಧ್ಯ. ಒವ್ಯಾಷ್‌ವಿಲಿ ತಾನು ಮಾಡಿರುವುದನ್ನು ಸಿನಿಮಾ ಎನ್ನುವುದಿಲ್ಲ; ಅವರ ಪಾಲಿಗೆ ಅದು 'ವರ್ಕ್ಸ್'. ಅವರು ಯಾವುದೇ ಸಿನಿಮಾ ಕುರಿತು ಮಾತನಾಡುವಾಗ ಹೇಳುವುದು ಕೂಡ 'ಐ ಲೈಕ್ ದೋಸ್ ವರ್ಕ್ಸ್' ಅಥವಾ 'ದೋಸ್ ವರ್ಕ್ಸ್ ಆರ್ ನಾಟ್ ಗುಡ್' ಎಂದೇ.

ಜಾರ್ಜಿಯಾದಿಂದ ಬೇರ್ಪಟ್ಟ ಅಬ್‌ಖಜಿಯಾ ಗಣರಾಜ್ಯವು, ಇಂಗುರಿ ನದಿಯ ವಾಯವ್ಯ ದಿಕ್ಕಿನಲ್ಲಿದೆ. ಈ ನದಿಯೇ ಒಂದು ಬಗೆಯಲ್ಲಿ ಜಾರ್ಜಿಯಾ, ಅಬ್‌ಖಜಿಯಾ ನಡುವಿನ ಗಡಿ. ರಷ್ಯಾದ ಹಿಡಿತದಲ್ಲಿರುವ ಅಬ್‌ಖಜಿಯಾದಲ್ಲಿ ಪ್ರತ್ಯೇಕತಾವಾದಿಗಳ ಕೂಗು ಏಳುತ್ತಲೇ ಇರುತ್ತದೆ. ಇಂಥ ಪ್ರಕ್ಷುಬ್ಧ ವಾತಾವರಣದ ನಡುವೆ ಒಂದು ತಾತ್ಕಾಲಿಕ ದ್ವೀಪ. ಅದರಲ್ಲಿ ಹಿರಿಯ ವಯಸ್ಸಿನ ರೈತ ಜೋಳ ಬೆಳೆಯುವ ಕಥಾನಕವನ್ನು ಸಿನಿಮಾ ಒಳಗೊಂಡಿದೆ. ಆ ರೈತ ಹಾಗೂ ಶಾಲೆಯಲ್ಲಿ ಕಲಿಯುತ್ತಿರುವ ಅವನ ಮೊಮ್ಮಗಳು ಕೇಂದ್ರ ಪಾತ್ರಗಳು.

ನದಿಯ ನೀರು ಚಳಿಗಾಲದಲ್ಲಿ ಕಡಿಮೆ ಆದಾಗ ಆ ಪ್ರದೇಶದಲ್ಲಿ ಕೃತಕ ದ್ವೀಪಗಳು ಮೂಡುತ್ತವೆ. ಅಂಥ ದ್ವೀಪಗಳಲ್ಲಿ ಒಂದನ್ನು ಆಯ್ದುಕೊಂಡು, ಅಲ್ಲಿನ ಮಣ್ಣು ಪರೀಕ್ಷಿಸಿ, ಜೋಳ ಬೆಳೆಯುವ ರೈತನ ಸಾಹಸ ಸಿನಿಮಾದ ಮೇಲ್ಮಟ್ಟದ ಕಥಾನಕ. ಆದರೆ, ಇಷ್ಟಕ್ಕೇ ಇದರ ಭಿತ್ತಿ ಸೀಮಿತಗೊಳ್ಳುವುದಿಲ್ಲ. ಯುದ್ಧದ ವಾತಾವರಣ ಅಲ್ಲಿದೆ ಎನ್ನುವುದನ್ನು ಗುಂಡಿನ ಸದ್ದುಗಳಿಂದಲೇ ನಿರ್ದೇಶಕರು ಕೇಳಿಸುತ್ತಾರೆ. ದ್ವೀಪದ ಸುತ್ತಮುತ್ತ ಮೋಟಾರು ದೋಣಿಗಳಲ್ಲಿ ಸಾಗುವ ಯೋಧರು ರಾಜಕೀಯ ಸ್ಥಿತಿಯನ್ನು ಸೂಚ್ಯವಾಗಿ ಬಿಂಬಿಸುತ್ತಾರೆ. ಬೇಟೆಗಾರರು ಪ್ರಕೃತಿ ವಿರೋಧಿ ಚಟುವಟಿಕೆಗಳ ಖಳರಂತೆ ಕಂಡೂ ಕಾಣದಷ್ಟು ಪ್ರಮಾಣದಲ್ಲಿ ವ್ಯಕ್ತಗೊಳ್ಳುವಂತೆ ಮಾಡುತ್ತಾರೆ.

ಸಿನಿಮಾ ಇಡುಕಿರಿದ ವಿವರಗಳಿಂದ ಕೂಡಿದೆ. ದಡದಿಂದ ತೆಪ್ಪದಲ್ಲಿ ಹೊರಟು ರೈತ ದ್ವೀಪ